(ಇಂದು ದಿನಾಂಕಃ **22-11-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದ:**

ನಮ್ಮ ಒಟ್ಟು ಕುಟುಂಬಕ್ಕೆ ಎಷ್ಟು ಆದಾಯವಿತ್ತು ಎಂದು ಬರೆಸಿಲ್ಲ ಎಂದರೆ ಸರಿ . ನನ್ನ ಅಜ್ಜ ಜೀವಂತ ಇದ್ದ ಕಾಲಕ್ಕೆ ಎಷ್ಟು ಆದಾಯ ಬರುತ್ತಿತ್ತು ಎನ್ನುವ ಬಗ್ಗೆ ತಹಶೀಲ್ದಾರವರಿಂದ ಯಾವುದೇ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಎಷ್ಟು ಕ್ರಯದ ಮೊತ್ತಕ್ಕೆ ಖರೀದಿ ಮಾಡಲಾಗಿದೆ ಎಂದರೆ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ ಆದರೆ ಸಾಕ್ಷಿದಾರ ಸುಮಾರು 60 ಲಕ್ಷ ಖರ್ಚು ಮಾಡಲಾಗಿದೆ ಎನ್ನುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ.

2. ಖರೀದಿ ಮಾಡಿದ ಸ್ವತ್ತುಗಳ ಕರಾರು ಪತ್ರಗಳನ್ನು ನಾನು ಹಾಜರು ಮಾಡಿಲ್ಲ ಎಂದರೆ ಸರಿ. ನಿ ಪಿ 5 ಪ್ರತಿವಾದಿ 8 ನೇಯವರ ಹೆಸರಿನಲ್ಲಿ ದಾಖಲಿದೆ ಎಂದರೆ ಸರಿ. ದಾವಾ 5 ನೇ ಬಿ ಸ್ವತ್ತು ಮೂಲತಃ ಶಿವಭಟ್ಟ ಅನ್ನಭಟ್ ಹಂದಿಗೋಳ ಅವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಶಿವಭಟ್ಟ ಅನ್ನಭಟ್ ಹಂದಿಗೋಳ ಅವರು ಪೋತಿಯಾದ ನತಂರ ಅವರ ಮಕ್ಕಳ ಹೆಸರಿಗೆ ಸದರಿ ಆಸ್ತಿ ಬಂದಿದ್ದು ನಂತರ ಅವರು 23.08.1947 ರಲ್ಲಿ ಭೀಮಭಟ್ಟ ಶಿವಭಟ್ಟ ಗಳಿಗಿ ರವರಿಗೆ ಖರೀದಿ ಕೊಟ್ಟಿದ್ದರು ಮತ್ತು ನಂತರ ಅವರ ಹೆಸರು ದಾಖಲೆಗಳಲ್ಲಿ ದಾಖಲಾಯಿತು ಎಂದರೆ ಗೊತ್ತಿಲ್ಲ.

3. ಭೀಮಭಟ್ಟ ಅವರು ತೀರಿ ಹೋದ ನಂತರ ಅವರ ಮಕ್ಕಳು ಮತ್ತು ಮೊಮ್ಮಕ್ಕಳ ಹೆಸರಿನಲ್ಲಿ ಸದರಿ ಆಸ್ತಿ ವಾರಸ ಪ್ರಕಾರ ದಾಖಲಾಯಿತು ಎಂದರೆ ಸರಿ . ನಂತರ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಸೇರಿ ಕುಟುಂಬದ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡರು ಎಂದರೆ ಸರಿ ಆದರೆ ನನ್ನ ತಾಯಿ ಅನುಮತಿ ಪಡೆದಿರುವುದಿಲ್ಲ . ನನ್ನ ತಾಯಿ 2001 ರಲ್ಲಿ ತೀರಿ ಹೋದರು . ದಾವಾ 3 ರಿಂದ 5 ನೇ ಬಿ ಸ್ವತ್ತುಗಳು ಸದರಿ ಪಾಲು ವಿಭಾಗದಲ್ಲಿ ದಿಃ 15.09.1984 ರಲ್ಲಿ ನನ್ನ ಅಜ್ಜ ಅಮೃತರಾವ್ ಅವರಿಗೆ ಬಂತು ಎಂದರೆ ಸರಿ. ಆ ಕಾರಣ ದಾವಾ 3 ರಿಂದ 5 ನೇ ಬಿ ಸ್ವತ್ತುಗಳು ಅಮೃತರಾವ್ ದತ್ತಕ್ ತಂದೆ ಗುರುನಾಥ ಗಳಗಿಯವರ ಸ್ವಯಾಜಿತ ಸ್ವತ್ತುಗಳಾಗುತ್ತವೆ ಎಂದರೆ ಸುಳ್ಳು.

4. ಅಮೃತರಾವ್ ಅವರು ಕುಟುಂಬದ ಯಾಜಮಾನರು ಆಗಿದ್ದರು ಎಂದರೆ ಸರಿ. ನನ್ನ ಅಜ್ಜ ಅಮೃತರಾವ್ ಅವರು 31.05.1994 ರಂದು ದಾವಾ 5 ನೇ ಬಿ ಸ್ವತ್ತನ್ನು ಪ್ರತಿವಾದಿ ಕಿ

ನೇ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನನ್ನ ಅಜ್ಜ ದಾವಾ 4 ನೇ ಬಿ ಸ್ವತ್ತನ್ನು ಮನೆತನದ ಅಡಚಣೆ ಸಲುವಾಗಿ ಪ್ರತಿವಾದಿ 7 ನೇ ಯವರಿಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಖರೀದಿ ಪತ್ರದ ಪ್ರಕಾರ ಪ್ರತಿವಾದಿ 7 ನೇಯವರ ಹೆಸರು ಉತಾರಿನಲ್ಲಿ ದಾಖಲಾಯಿತು ಎಂದರೆ ಗೊತ್ತಿಲ್ಲ. 2020 ರಲ್ಲಿ ನನಗೆ ಖರೀದಿ ಆದ ವಿಚಾರ ಗೊತ್ತಾಯಿತು. ದಾವೆ ಹಾಕುವ ಕಾಲಕ್ಕೆ ಖರೀದಿಯಾಗಿ 27 ವರ್ಷವಾಗಿತ್ತು ಎಂದರೆ ಸರಿ ಆದರೆ ನಮಗೆ ಗೊತ್ತಾಗಿದ್ದು 2020 ರಲ್ಲಿ ಎನ್ನುತ್ತಾರೆ. ನನ್ನ ತಾಯಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ಅಮೃತರಾವ್ ಅವರೇ ಸ್ವತಃ ದಾವಾ 4 ಮತ್ತು 5 ನೇ ಬಿ ಸ್ವತ್ತುಗಳನ್ನು ಮಾರಾಟ ಮಾಡಿದ್ದರಿಂದ ನನ್ನ ತಾಯಿಗೆ ಅವುಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ನೇಯವರು ದಾವಾ 4 ಮತ್ತು 5 ನೇ ಬಿ ಸ್ವತುಗಳಲ್ಲಿ ಖರೀದಿ ಆದಾಗಿನಿಂದಲೂ ಅದೇ ಸ್ವತ್ತುಗಳಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವೆ ಹಾಕುವ ಕಾಲಕ್ಕೆ ಖರೀದಿ ಹಿಡಿದವರ ಹೆಸರು ದಾಖಲಾಗಿತ್ತು ಎಂದರೆ ಸರಿ. ಜಮೀನುಗಳು ಉತಾರಗಳು ರಮೇಶ ಗಳಗಿ ಮತ್ತು ಅವರ ಹೆಸರುಗಳಲ್ಲಿ ಇದ್ದವು ಎಂದೆ ಸರಿ. ನಾವೇನು ಮನೆ ಆಸ್ತಿಗಳಿಗೆ ಕರ ತುಂಬಿರುವುದಿಲ್ಲ. ಹುಬ್ಬಳ್ಳಿ ಮತ್ತು ಬೆಂಗಳೂರಿನ ಮನೆಗಳಿಗೆ ನಾವೇನು ಕರ ತುಂಬಿದ್ದು ಗೊತ್ತಿಲ್ಲ. ಅಣ್ಣಿಗೇರಿಯ ಪುರಸಭೆ ವ್ಯಾಪ್ತಿಯಲ್ಲಿರುವ ಮನೆಗಳಿಗೆ ನಾವೇನು ಕರ ತುಂಟಿದ್ದು ಗೊತ್ತಿಲ್ಲ. ಜಮೀನು ಆಸ್ತಿಗಳಿಗೆ ಕಂದಾಯ ತುಂಬಿದ್ದು ಗೊತ್ತಿಲ್ಲ. ಯಾವುದೇ ಜಮೀನುಗಳು ಮತ್ತು ಸ್ವತ್ತುಗಳಿಗೆ ಕರಗಳನ್ನು ತುಂಬಿಲ್ಲ ಎಂದರೆ ಗೊತ್ತಿಲ್ಲ . ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲುಃ ಸಮಯ ಕೋರಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ .

Sd/-

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ
ನವಲಗುಂದ.